# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **704** |
| **ಸದಸ್ಯರ ಹೆಸರು** | : | **ಡಾ: ಉಮಾಶ್ರೀ (ನಾಮ ನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | : | **: 12.03.2025** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು** |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಮಹಿಳಾ ಪಶುಸಂಗೋಪನೆ ಸಹಕಾರಿ ಸಂಘಗಳು ಎಷ್ಟಿವೆ ಮತ್ತು ಅವುಗಳಿಗೆ ಪ್ರತಿ ವರ್ಷ ಅನುದಾನ ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಪ್ರತಿ ಮಹಿಳಾ ಸಂಗೋಪನಾ ಸಂಸ್ಥೆಗಳಿಗೆ ಎಷ್ಟು ಅನುದಾನ ನೀಡಲಾಗುತ್ತಿದೆ; | ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳದ ಕಾರ್ಯವ್ಯಾಪ್ತಿಯ 16 ಜಿಲ್ಲಾ ಹಾಲು ಒಕ್ಕೂಟಗಳಲ್ಲಿ 4,693 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳು ಕಾರ್ಯಾಚರಣೆಯಲ್ಲಿರುತ್ತವೆ. ಪ್ರತಿ ವರ್ಷ 250 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಿಗೆ ಪ್ರತಿ ಸಂಘಕ್ಕೆ ರೂ.7,33,000/- ರಂತೆ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ ಮತ್ತು ರಾಷ್ಟ್ರೀಯ ಜೀವನೋಪಾಯ ಅಭಿಯಾನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ (ಕೆ.ಎಸ್.ಆರ್.ಎಲ್.ಪಿ.ಎಸ್.), ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ಅನುದಾನವನ್ನು ನೀಡಲಾಗುತ್ತಿದೆ. |
| ಆ) | ಪಶುಸಂಗೋಪನ ಸಹಕಾರಿ ಮಹಿಳಾ ಸಂಸ್ಥೆಗಳ ಮೂಲಕ ಮಹಿಳಾ ಸಬಲೀಕರಣಕ್ಕಾಗಿ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು; | ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆ ವತಿಯಿಂದ ದೀನ ದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (ಡೇ-ಎನ್.ಆರ್.ಎಲ್.ಎಂ) ಕಾರ್ಯಕ್ರಮಗಳನ್ನು 2011-12ನೇ ಸಾಲಿನಿಂದ ರಾಜ್ಯಾದ್ಯಂತ ಅನುಷ್ಠಾನ ಮಾಡಲಾಗುತ್ತಿದ್ದು, ಕಾರ್ಯಕ್ರಮ ಪ್ರಗತಿಯಲ್ಲಿರುತ್ತದೆ.<br><br>**<u>ಕಾರ್ಯಕ್ರಮಗಳ ವಿವರ:</u>**<br>• ಹೈನು ರಾಸು ನಿರ್ವಹಣೆ ಬಗ್ಗೆ ತರಬೇತಿ ಹಾಗೂ ರಾಸುಗಳ ವಿತರಣೆ<br>• ಮೇವು ಮತ್ತು ಮೇವು ಬೆಳೆ ಅಭಿವೃದ್ಧಿ ಕುರಿತ ಅರಿವು.<br>• ಲಿಂಗತ್ವ ಸಂವೇದನೆ, ಕಾನೂನು ಸಾಕ್ಷರತೆ ಮತ್ತು ಕೌಟುಂಬಿಕ ಹಿಂಸೆ ಕುರಿತ ಅರಿವು<br>• ಪಶು ಆರೋಗ್ಯ ಶಿಬಿರ ಮತ್ತು ಬ್ಯಾಂಕ್ ಸಂಪರ್ಕ ಕುರಿತ ಅರಿವು.<br>• ಮಹಿಳೆಯರ ಅಹಾರ ಮತ್ತು ಪೌಷ್ಠಿಕತೆ ಕುರಿತು ಅರಿವು |

ಸಂಖ್ಯೆ: ಪಸಂಮೀ 17 ಕಹಾಮ 2025

(ಸಹಿ)

**(ಕೆ.ವೆಂಕಟೇಶ್)**

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು